ಕವಿ ಚಂಪಾ ಅವರಿಗೆ ಶಾಲ್ಮಲಾ ಕೇವಲ ಗುಪ್ತಗಾಮಿನಿಯಷ್ಟೇ ಅಲ್ಲ. 'ಬೆಂಕಿ ಹಾಡು ಉಸುರುವವಳು ಸದಾ ತಪ್ತ ಕಾಮಿನಿ, ಕನಸಿನಲ್ಲಿ ತುಳುಕುವವಳು ಸದಾ ಸುಪ್ತ ಮೋಹಿನಿ.' ಕಡೆಗೆ 'ಬದುಕು ಭುವನೇಶ್ವರಿ'ಯಾಗುತ್ತಾಳೆ. ನಿಗೂಢತೆ, ತಪ್ತತೆ, ಮೋಹಕತೆಗಳೊಂದಾದ ಬದುಕಿನ ರೂಪಕವಾಗಿ ಶಾಲ್ಮಲಾ ನದಿಯನ್ನು ಅಕ್ಷರಗಳಲ್ಲಿ ಕಟ್ಟುತ್ತಾ 'ಭುವನೇಶ್ವರಿ, ಹೃದಯೇಶ್ವರಿ' ಎನ್ನುವವರೆಗೂ ಕೊಂಡೊಯ್ಯುವ ಚಂಪಾ, ಗಹನ ಗಂಭೀರ ಕವಿಯಾಗಿ ಕೂಡ ಮುಖ್ಯವಾಗುತ್ತಾರೆ. ಬದುಕು ಮತ್ತು ಸಾಹಿತ್ಯವನ್ನು ಕುರಿತಂತೆ ಚಂಪಾ ಅವರಿಗಿದ್ದ ಗಂಭೀರ ಚಿಂತನೆಯ ಆಯಾಮವನ್ನು ಅರಿಯಲು ಅವರ ಕೃತಿಗಳಿಗೆ ಬರೆದುಕೊಂಡ 'ಲೇಖಕರ ಮಾತು'ಗಳನ್ನು ಗಮನಿಸಬೇಕು:

'ನಾನು ಕಂಡದ್ದೇ ಪೂರ್ಣ ಸತ್ಯವಲ್ಲ; ನನಗೆ ಕಂಡಷ್ಟೇ ಪೂರ್ಣ ಸತ್ಯವಲ್ಲ, ಹಾಗೆ ನೋಡಿದರೆ ಪೂರ್ಣ ಸತ್ಯವೆಂಬುದೇ ಇಲ್ಲ. ನಮ್ಮ ನಮ್ಮ ನೆಲೆಯಲ್ಲಿ ನಾವು ನೋಡಿದ್ದು, ನಮಗೆ ಕಂಡದ್ದು, ನಮ್ಮ ನಮ್ಮ ಮಟ್ಟಿಗೆ ಮಾತ್ರ ಖರೇ ಎಂದು ಹೇಳಬಹುದೇನೋ. ಈ ಅರಿವು ನನಗಿದೆ.' **(ಬೇಂದ್ರೆ–ನಾನು ಕಂಡಂತೆ, ನನಗೆ ಕಂಡಷ್ಟು–1995)**

'ಮನುಷ್ಯನ ಅಂತರಂಗದ ಜಗತ್ತಾಗಲಿ, ಅವನ ಅನುಭವದ ಉಗ್ರಾಣವಾದ ಸುತ್ತಣ ಬದುಕಾಗಲಿ, ಅಭಿವ್ಯಕ್ತಿ ಮಾಧ್ಯಮವಾದ ಭಾಷೆಯಾಗಲಿ – ಯಾವುದೂ ಅಷ್ಟು ಸರಳವಿರುವುದಿಲ್ಲ. ಅವುಗಳ ಆಳದ ಸಂಕೀರ್ಣತೆ ಹೊರನೋಟಕ್ಕೆ ಅಸಂಬದ್ಧವಾಗಿಯೇ ಕಾಣಬಹುದು.' **(ಶಾಲ್ಮಲಾ ನನ್ನ ಶಾಲ್ಮಲಾ–1994)**

'ಅರ್ಧ ಕನಸು, ಅರ್ಧ ಎಚ್ಚರದ ಮಬ್ಬುಗಾವಳದಲ್ಲಿಯೇ ನನ್ನ ಹೆಚ್ಚಿನ ಕವನಗಳಿಗೆ ಕಣ್ಣು, ಮೂಗು ಮೂಡುವುದು.' **(ಗುಂಡಮ್ಮನ ಹಾಡು–1994)**

'ಬದುಕಿನಲ್ಲಿ ಯಾವುದೇ ಮೂಲಭೂತ ಹೋರಾಟವಾಗಲಿ, ಏರಿಳಿತವಾಗಲಿ ಇಲ್ಲದ ಇಂಗ್ಲಿಷ್ ಅಥವಾ ಅಮೆರಿಕನ್ ಸೃಷ್ಟಿಶೀಲ ಸಾಹಿತ್ಯದ ಜಾಡ್ಯದಿಂದ, ನಮ್ಮ ಸಾಹಿತ್ಯ ಮುಕ್ತವಾದಷ್ಟು ಒಳ್ಳೆಯದು. ಅಭಿವೃದ್ಧಿಶೀಲ, ಸಮಾಜವಾದಿ ರಾಷ್ಟ್ರಗಳ ಹೋರಾಟ, ಪ್ರತಿಭಟನೆಗಳ ಗಂಡು ಸಾಹಿತ್ಯ ನಮ್ಮಲ್ಲಿ ಪ್ರವೇಶ ಪಡೆಯಬೇಕು, ಅಂಥ ಸಮಯ ಈಗ ಬಂದಿದೆ.' **(ಓ ನನ್ನ ದೇಶ ಬಾಂಧವರೆ–1977)**

(ಇಲ್ಲಿ 'ಗಂಡು ಸಾಹಿತ್ಯ' ಎಂಬ ಪದ ಪ್ರಯೋಗ ಸರಿ ಎನ್ನಿಸುವುದಿಲ್ಲ. ಪುರುಷ ಪ್ರಧಾನ ಪರಿಭಾಷೆ ಪ್ರೇರಿತ ಸಾಂಪ್ರದಾಯಿಕ ಬಳಕೆಯ ಫಲವಾಗಿ 'ಗಂಡು ಸಾಹಿತ್ಯ' ಎಂಬ ಪದ ಪ್ರಯೋಗ ಬಂದಿದೆ. ಇಂಥ ಸರಿಯಲ್ಲದ ಪದ ಪ್ರಯೋಗದ ಹೊರತಾಗಿ, ಚಂಪಾ ಅವರ ಮಾತುಗಳ ಆಶಯ ಸರಿಯಾಗಿದೆ. ನನ್ನ ಅಭಿಪ್ರಾಯದಲ್ಲಿ ನಿಜವಾದ ಹೋರಾಟ, ಪ್ರತಿಭಟನೆಗಳು ಸ್ತ್ರೀಪರ ಸಂವೇದನೆಯಿಂದ ದೂರವಿರುವುದಿಲ್ಲ, ದೂರವಿರಬಾರದು. ಇದು ಚಂಪಾ ಅವರಿಗೆ ತಿಳಿದ ವಿಷಯವೂ ಆಗಿತ್ತು).

'ಕೇವಲ ತಕ್ಷಣದ ಖುಷಿಯ ಜೊತೆಗೇ ಅನುಭವದ ಅನೇಕ ಸ್ತರಗಳನ್ನು ತಟ್ಟುವುದು ಈ ಪ್ರಕಾರಕ್ಕೆ ಸಾಧ್ಯ. ಆದರೆ, ಪ್ರತಿ ಪ್ರಕಾರಕ್ಕೂ ಮಿತಿ ಇದೆ. ಪಣತಿ ನೀಡುವುದೂ ಬೆಳಕೇ; ಸೂರ್ಯ ನೀಡುವುದೂ ಬೆಳಕೇ. ಆದರೆ, ಪಣತಿ ಪಣತಿಯೇ, ಸೂರ್ಯ ಸೂರ್ಯನೇ.' **(ಚುಟುಕು ಸಾಹಿತ್ಯ ಪ್ರಕಾರ ಕುರಿತು 'ಚಂಪಾ ಲಹರಿ' ಕೃತಿಯಲ್ಲಿ)**

'ನಾನೊಬ್ಬ ಕವಿ, ಆದ್ದರಿಂದ ಯಾವುದಕ್ಕೂ ಕವಿಯಾಗಿಯೇ ಪ್ರತಿಸ್ಪಂದಿಸುವವ–ಎಂಬ ಕಾವ್ಯ–ವ್ಯಕ್ತಿತ್ವದ ಅನನ್ಯತೆಯಲ್ಲಿ ನನಗೆ ನಂಬಿಗೆ ಇಲ್ಲ. ಹಾಗೆ ನಂಬಿದವರೆಲ್ಲ ಭ್ರಮಾಧೀನರೆಂದೇ ನನ್ನ ಅನಿಸಿಕೆ. ಬದುಕಿನ ಅನೇಕ ಸೆಳವುಗಳು ವ್ಯಕ್ತಿತ್ವವನ್ನು ರೂಪಿಸುತ್ತಿರುವಾಗ, ಆ ಸೆಳವುಗಳನ್ನು ದಾಖಲಿಸುವ–ಭಾಷೆಯ ಮೂಲಕ ಕಲಾತ್ಮಕವಾಗಿ ದಾಖಲಿಸುವ–ಹಾಗೇ ದಾಖಲಿಸುತ್ತಲೇ